ಇ) 1996-97 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಮಂಜೂರಾತಿಗಾಗಿ 8 ಪ್ರಸ್ತಾವನೆಗಳು, ಖಾಸಗಿ ಪ್ರೌಢಶಾಲೆಗಳ ಮಂಜೂರಾತಿಗಾಗಿ ಒಂದು ಪ್ರಸ್ತಾವನೆ ಮತ್ತು ಸರ್ಕಾರಿ ಪ್ರೌಢಶಾಲೆಗಳ ಮಂಜೂರಾತಿಗಾಗಿ 10 ಪ್ರಸ್ತಾವನೆಗಳು ಬಂದಿದೆ.

ಈ) 8 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮತ್ತು ಒಂದು ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

ವಿಷಯ :- ಅನುದಾನಿತ ಶಿಕ್ಷಕೇತರರ ಬೇಡಿಕೆಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1050 (1687)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ : 27-03-95 ರಂದು ಸರ್ಕಾರದವರು ಖಾಸಗಿ ಅನುದಾನಿತ ಕಾಲೇಜುಗಳ ಬೋಧಕೇತರ ಸಿಬ್ಬಂದಿಗಳ 20 ಬೇಡಿಕೆಗಳಲ್ಲಿ ಕೆಲವೊಂದು ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಭರವಸೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬೇಡಿಕೆಗಳನ್ನು ಸರ್ಕಾರ ಇನ್ನೂ ಈಡೇರಿಸಿಲ್ಲವೆಂಬುದು ನಿಜವೇ?

ಇ) ಹಾಗಿದ್ದಲ್ಲಿ ಇವರ ಬೇಡಿಕೆಗಳನ್ನು ಯಾವಾಗ ಈಡೇರಿಸಲಾಗುವುದು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಬಂದಿದೆ.

ಆ) ಕೆಲವು ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಪ್ರಸ್ತುತ ನಿಯಮಗಳ ಪ್ರಕಾರ ಅವಕಾಶವಿಲ್ಲ. ಕೆಲವ ಬೇಡಿಕೆಗಳ ಬಗ್ಗೆ ನ್ಯಾಯಾಲಯದ ತೀರ್ಮಾನವನ್ನು ಕಾಯಬೇಕಾಗಿದೆ.

ಇ) ಆರ್ಥಿಕ ಮತ್ತು ಕಾನೂನು ದೃಷ್ಟಿಗಳಿಂದ ಇವುಗಳನ್ನು ಪರಿಶೀಲಿಸ ಲಾಗುತ್ತಿದೆ.

3) **ಅಧ್ಯಕ್ಷರ ಅಪ್ಪಣೆ ಮೇರೆಗೆ**

ವಿಷಯ (ಅ) ಪುತ್ತೂರು ತಾಲ್ಲೂಕಿನಲ್ಲಿ ಅಡಿಕೆ ತೋಟಗಳಿಗೆ ವಿಚಿತ್ರ ವಾದಂಥ ರೋಗ.

+ ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) :- ಮಾನ್ಯ ಸಭಾಧ್ಯಕ್ಷರೇ, ಪುತ್ತೂರು ತಾಲ್ಲೂಕಿನಲ್ಲಿ ಅಡಿಕೆ ತೋಟಗಳಿಗೆ ವಿಚಿತ್ರವಾದಂತಹ ರೋಗ ತಗುಲಿದೆ.

ಅಡಿಕೆ ತೋಟಗಳನ್ನು ಬೆಳೆದ ಜಾಗದಲ್ಲಿ ವಿಚಿತ್ರವಾದಂತಹ ರೀತಿಯ ಇರುವೆಗಳು ಹರಡಿದ್ದು, ಇದು ಮಣ್ಣು ಮತ್ತು ಅಡಿಕೆ ಗಿಡಗಳಿಗೆ ಹಾಕಿದ ಗೊಬ್ಬರದಿಂದ ಮರ ಮತ್ತು ರೆಂಬೆಗಳಲ್ಲಿ ಹರಡಿರುವುದರಿಂದ ಕಳೆದ ಒಂದು ವರ್ಷದಿಂದ ಸುಮಾರು ನೂರಾರು ಎಕರೆ ಅಡಿಕೆ ತೋಟಕ್ಕೆ ಹಾನಿಯಾಗಿರುತ್ತದೆ. ಇದು ದಿನದಿನಕ್ಕೂ ಅಕ್ಕಪಕ್ಕದ ತೋಟಗಳಿಗೂ ಕೂಡ ಪಸರಿಸುತ್ತಿದೆ. ಯಾವುದೇ ಕ್ರಿಮಿನಾಶಕವನ್ನು ಸಿಂಪಡಿಸಿದರೂ ಕೂಡ ಸಾಯುತ್ತಾ ಇಲ್ಲ. ಈಗಾಗಲೇ ಈ ರೋಗಪೀಡಿತ ಅಡಿಕೆ ತೋಟದ ಮಾಲೀಕರು ಕೃಷಿ ಹಾಗೂ ತೋಟಗಾರಿಕಾ ಇಲಾಖೆಗೂ, ಜಿಲ್ಲಾ ಮಂತ್ರಿಗಳಿಗೂ ಕೂಡ ಈ ವಿಷಯವನ್ನು ತಿಳಿಸಿದರೂ ಕೂಡ ಈ ತನಕ ಯಾವುದೇ ಪ್ರಕ್ರಿಯೆ ಆಲ್ಲಿ ತೆಗೆದುಕೊಂಡಿರುವುದಿಲ್ಲ. ಈಗಾಗಲೇ ಕ್ಯಾಮ್ಕೋ ಸಂಸ್ಥೆಯ ಒಂದು ತಜ್ಞರ ತಂಡವನ್ನು ಆಲ್ಲಿ ಕರೆದುಕೊಂಡು ಹೋಗಿದ್ದರು ಆ ತಂಡದ ವಿಜ್ಞಾನಿಗಳು ರೈತರಲ್ಲಿ ಯಾವುದೇ ವಿಚಾರವಾಗಿ ಸ್ಪಷ್ಟೀಕರಣವನ್ನು ಕೇಳಲಿಲ್ಲ. ಇದು ಹೇಗೆ ಬಂತು, ಏನು ಗೊಬ್ಬರವನ್ನು ನೀವು ಹಾಕುತ್ತಿದ್ದೀರಿ ಎಂದು ಸಹ ಕೇಳಲಿಲ್ಲ. ಕೇವಲ ವಸ್ತುಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸದೇ ಅಡಿಕೆ ಬೆಳೆಗಾರರನ್ನು ಪ್ರಯೋಗದ ಬಲಿಪಶುಗಳನ್ನಾಗಿ ಮಾಡುವಂತಹ ಕೆಲಸವಾಗಿದೆ. ಪತ್ರಿಕೆಗಳಲ್ಲಿ ಬಂದಂತಹ ತಜ್ಞರ ವರದಿ ನೋಡಿದರೆ ಅತ್ಯಂತ ವಿಚಿತರವಾಗಿ ಕಾಣುತ್ತಿದೆ. ಆಲ್ಲಿ ನೀರು ಹಿಂಗುವಿಕೆ ಇಲ್ಲ, ಅಂತ ಹೇಳಿದ್ದಾರೆ. ಆದರೆ ನಾನು ಖುದ್ದಾಗಿ ಆಲ್ಲಿಗೆ ಭೇಟಿ ಕೊಟ್ಟಿದ್ದೇನೆ. ನೀರು ಹಿಂಗುವಿಕೆಗೆ ಬೇಕಾದಷ್ಟು ಚರಂಡಿಗಳನ್ನು ಎಲ್ಲಾ ರೀತಿಯಲ್ಲೂ ಆಲ್ಲಿ ಮಾಡಿದ್ದಾರೆ. ಆಲ್ಲಿ ಗೊಬ್ಬರವನ್ನು ಕೊಳಸದೇ ಹಾಕಿದ ಕಾರಣ ಎಂದು ಹೇಳಿದ್ದಾರೆ, ಆದರೆ ಆಲ್ಲಿ ಹಟ್ಟಿಗೊಬ್ಬರ ಮಾತ್ರ ಉಪಯೋಗ ಮಾಡುತ್ತಾರೆ. ವಿಪರೀತವಾಗಿ ಕ್ರಿಮಿನಾಶಕಗಳನ್ನು ಬಳಕೆ ಮಾಡಿದ ಕಾರಣ ಎಂದು ಹೇಳುತ್ತಾರೆ. ಈ ರೀತಿ ವಿಚಿತ್ರವಾದಂತಹ ಉತ್ತರವನ್ನು ಅವರು ಕೊಟ್ಟಿದ್ದಾರೆ. ಈಗಾಗಲೇ ಆಲ್ಲಿ ನೂರರಿಂದ ನೂರಿಪ್ಪತ್ತೈದು ಎಕರೆಯವರೆಗೂ ಇದು ಪಸರಿಸಿದೆ. ಈ ಬಗ್ಗೆ ಜಿಲ್ಲಾ ಮಂತ್ರಿಗಳಿಗೂ ತಿಳಿಸಿದರೂ ಕೂಡ ಅವರು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಳದಿ ಎಲೆ ರೋಗ ಎಂದು ಹರಡಿ ಸುಮಾರು ಸಾವಿರಾರು ಎಕರೆ ತೋಟ ಹಾಳಾಗಿದ್ದು, ಇದು ಮಂತ್ರಿಗಳ ಗಮನಕ್ಕೆ ಬಂದಿರಬಹುದು. ಈಗ ಆಲ್ಲಿ ಈ ಬಗ್ಗೆ ವಿಚಾರ ಮಾಡಿದಾಗ ಯಾವುದೇ ಒಂದು ಪ್ರಕ್ರಿಯೆ ತಮ್ಮ ಕೃಷಿ ಇಲಾಖೆಯಿಂದಾಗಲಿ, ತೋಟಗಾರಿಕಾ ಇಲಾಕೆಯಿಂದಾಗಲೀ ಬಾರದೇ ಈಗ ಸಂಪೂರ್ಣವಾಗಿ ಆಲ್ಲಿರುವ ಅಡಿಕೆ ಬೆಳೆಗಾರರು ತೊಂದರೆಗೀಡಾಗಿದ್ದಾರೆ. ದಿನದಿಂದ ದಿನಕ್ಕೆ ಇದು ಪಸರಿಸಿ ಕೇವಲ ಗ್ರಾಮಾಂತರ ಮಟ್ಟದಲ್ಲಿ ಮಾತ್ರವಲ್ಲ ತಾಲ್ಲೂಕು ಮಟ್ಟಕೆ ಇದು ಪಸರಿಸುವಂತಹ ಸಂದರ್ಭ ಇದೆ. ಅದಲ್ಲದೆ ಆಲ್ಲಿ ಯಾರು ಅಡಿಕೆ ಬೆಳೆಗಾರರು ನಷ್ಟ ಹೊಂದಿದ್ದಾರೆ, ಅವರಿಗೆ ಪರಿಹಾರ ಕೊಡಬೇಕು. ಎಂದು ಕೇಳಿದಾಗ ಅದಕ್ಕೆ ಯಾವುದೇ ಉತ್ತರ ಬರಲಿಲ್ಲ. ನನ್ನ ವಿನಂತಿ ಏನೆಂದರೆ ತಕ್ಷಣ ಅವರಿಗೆ ಬೇಕಾದಂತಹ ಪರಿಹಾರ ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕು. ಮತ್ತು ನಷ್ಟವಾಗಿರುವಂತಹ ರೈತರಿಗೆ ಸೂಕ್ತ ಪರಿಹಾರವನ್ನು ಒದಗಿಸಿ ಕೊಡಬೇಕು ಎಂದು ತಮ್ಮ ಮೂಲಕ ಆಗ್ರಹ ಪಡಿಸುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :- ಮಾನ್ಯ ಅಧ್ಯಕ್ಷರೇ, ಪುತ್ತೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಇರುವೆ ಹಾವಳಿ ಜಾಸ್ತಿಯಾಗಿ 35 ಕುಟುಂಬಗಳಿಗೆ ಸೇರಿದ ನೂರಕ್ಕಿಂತಲೂ ಹೆಚ್ಚು ಎಕರೆ ಕೃಷಿ ನಷ್ಟವಾಗಿದೆ. ಇದರ ಬಗ್ಗೆ ಸನ್ಮಾನ್ಯ ಸದಾನಂದಗೌಡರು ಹೇಳಿದ ಹಾಗೆ ಕೃಷಿ ತಜ್ಞರು ಮತ್ತು ಕೃಷಿ ವಿಜ್ಞಾನಿಗಳು ಕ್ಯಾಮ್ಕೋ ಅವರ ಮೂಲಕ ಅಲ್ಲಿ ಹೋಗಿ ಪರೀಕ್ಷೆ ಮಾಡಿದ್ದೀರಿ. ಆದರೆ ನಾಟಕ ಮಾತ್ರ ಮಾಡಿದ್ದಾರೆ, ಸರಿಯಾದಿ ರಿಪೋರ್ಟ್ ಕೊಟ್ಟಿಲ್ಲ. ಇವತ್ತು ಇಷ್ಟೊಂದು ನಷ್ಟವಾಗಿದೆ, ಇಷ್ಟು ನಷ್ಟವಾಗಿದ್ದರೂ ಕೂಡ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಇವತ್ತು ಒಂದು ಬೆಳೆ ಹಾಕಿ ಅದರ ಫಲ ಬಿಡಬೇಕಾದರೆ ಸುಮಾರು 7 ವರ್ಷಗಳು ಬೇಕಾಗುತ್ತದೆ. ಅದಕ್ಕೆ ಬಹಳಷ್ಟು ಹಣ ಖರ್ಚು ಮಾಡಿದ್ದಾರೆ. ಇಷ್ಟು ನಷ್ಟವಾಗಿದೆ, ಇಷ್ಟು ತೊಂದರೆಗೆ ಒಳಗಾಗಿದ್ದರೂ ಕೂಡ ಸರ್ಕಾರ ಇಲ್ಲಿಯವರೆಗೆ ಗಮನ ಕೊಟ್ಟಿಲ್ಲ. ನಾನು ಕೇಳುವುದಕ್ಕೆ ಇಷ್ಟಪಡುವುದೇನೆಂದರೆ ಸರ್ಕಾರ ತಕ್ಷಣ ಅಲ್ಲಿಗೆ ಗಮನ ಕೊಟ್ಟು ತಕ್ಷಣ ಸಂದರ್ಶನ ಮಾಡಿ ಇನ್ನು ಮುಂದಕ್ಕೆ ಇರುವೆ ಹಾವಳಿ ಜಾಸ್ತಿ ಹರಡದಂತೆ ಮಾಡಿ, ನಷ್ಟವಾದವರಿಗೆ ಪರಿಹಾರವನ್ನು ಕೊಡುವಂತಹ ರೀತಿಯಲ್ಲಿ ಸರ್ಕಾರ ತಕ್ಷಣ ಗಮನ ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಡಿ. ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಂತೆ ಫೋಟೋ ಮತ್ತು ಆಡಿಕೆಯನ್ನು ಕಳುಹಿಸಿಕೊಡುತ್ತಿದ್ದೇನೆ. ಆಡಿಕೆ ಗೊನೆಗಳು ಯಾವ ರೀತಿಯಾಗುತ್ತಿದೆ ಎಂದು ಸಹ ತೋರಿಸುವುದಕ್ಕೆ ಆಡಿಕೆಗಳನ್ನು ಕಳುಹಿಸುತ್ತಿದ್ದೇನೆ.

ಶ್ರೀ ಪಿ. ಚೈರೇಗೌಡ (ಕೃಷಿ ಸಚಿವರು) :- ಮಾನ್ಯ ಅಧ್ಯಕ್ಷರೇ, ಈಗತಾನೇ ನನ್ನ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ಕೃಷಿ ವಿಶ್ವವಿದ್ಯಾನಿಲಯದ ನಮ್ಮ ವಿಜ್ಞಾನಿಗಳ ಜೊತೆ ಸಂಪರ್ಕ ಬೆಳೆಸಿದ್ದೇನೆ. ಅವರನ್ನು ತತ್‌ಕ್ಷಣ ಆ ಸ್ಥಳಕ್ಕೆ ಭೇಟಿ ನೀಡತಕ್ಕಂಥ ವ್ಯವಸ್ಥ ಮಾಡುತ್ತೇನೆ. ನಮ್ಮಲ್ಲಿ ಬಹಳ ಒಳ್ಳೆಯ ವಿಜ್ಞಾನಿಗಳು ಕೂಡ ಇದ್ದಾರೆ. ಅನೇಕ ಸಂದರ್ಭದಲ್ಲಿ ಕೆಲವು ರೋಗಗಳು ಬಂದಿವೆ. ಆ ರೋಗಗಳನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ವೈರಸ್ ರೋಗಗಳು ಏನಿವೆ ಅವುಗಳನ್ನು ತಡೆಗಟ್ಟುವುದಕ್ಕಾಗುವುದಿಲ್ಲ. ಆ ರೋಗ ಬಂದತಕ್ಷಣ ಗಿಡ, ಮರಗಳನ್ನು ಸುಡದೇ ಅದು ಹೋಗುವುದಿಲ್ಲ. ಇನ್ನು ಹಳದಿ ಎಲೆ ರೋಗ ಎಂದು ಬರುತ್ತದೆ. ಅದು ಬಂದರೆ ಅದನ್ನು ಸುಡಬೇಕಾಗುತ್ತದೆ. ಈ ರೀತಿಯಾದ ಕ್ರಮಗಳನ್ನು ವಿಜ್ಞಾನಿಗಳು ಸಲಹೆ ಮಾಡುತ್ತಾರೆ. ನಾನು ತಕ್ಷಣ ಅಲ್ಲಿಗೆ ವಿಜ್ಞಾನಿಗಳ ತಂಡವನ್ನು ಕಳುಹಿಸಿ ಅಲ್ಲಿ ಏನು ಮಾಡಬೇಕು ಎನ್ನುವ ಸಲಹೆಯನ್ನು ಅಲ್ಲಿರತಕ್ಕಂಥ ರೈತರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಖಂಡಿತ ಮಾಡುತ್ತೇನೆ ಇನ್ನೊಂದು ವಿಷಯ ಮಾನ್ಯ ಪೂಜಾರಿಯವರು ವಿಜ್ಞಾನಿಗಳು ಅಲ್ಲಿ ಹೋಗಿ ನಾಟಕ ಮಾಡಿದರು ಎಂದು ಹೇಳಿದರು. ವಿಜ್ಞಾನಿಗಳ ಬಗ್ಗೆ ನಾವು ಗೌರವದಿಂದ ಇರಬೇಕಾಗುತ್ತದೆ. ಅವರು ನಾಟಕಕಾರರಂತೂ ಖಂಡಿತ ಅಲ್ಲ.

MR. SPEAKER :- That is the strongest way of expression. There is nothing offensive in it.

ಶ್ರೀ ಸಿ. ಬೈರೇಗೌಡ :- ನಾವು ವಿಜ್ಞಾನಿಗಳ ಬಗ್ಗೆ ಗೌರವವನ್ನು ತೋರಿಸ ಬೇಕಾಗುತ್ತದೆ. ನಾಟಕ ಮಾಡಿದರು ಎಂದರೆ ಅವರು ನಾಟಕಕ್ಕೆಂದು ಖಂಡಿತ ಹೋಗಿರಲಿಲ್ಲ. ಅವರು ಅಲ್ಲಿಗೆ ರೈತರ ಸಮಸ್ಯೆ ಏನಿದೆ ಎಂದು ಅದನ್ನು ನೋಡಿ ಅಧ್ಯಯನ ಮಾಡುವುದಕ್ಕೆ ಹೋಗಿದ್ದಾರೆ. ನಮ್ಮ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಏನಿದ್ದಾರೆ ಅವರನ್ನು ತಕ್ಷಣ ಆ ಸ್ಥಳಕ್ಕೆ ಕಳುಹಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಆ ರೋಗವನ್ನು ಗುಣಪಡಿಸುವುದಕ್ಕೆ ಅಥವಾ ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ ಎಂದರೆ ಮರ ಅಥವಾ ಗಿಡಗಳಿದ್ದರೆ ಅವುಗಳನ್ನು ಕಡಿದು ಸುಡಲೇಬೇಕಾಗುತ್ತದೆ. ನನ್ನ ಅನುಭವದಲ್ಲಿ ನಾನು ಇದನ್ನು ಹೇಳುತ್ತೇನೆ, ಇದರ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯ ಏನಿದೆ ಎಂದು ಗೊತ್ತಿಲ್ಲ. ಇನ್ನು ಪರಿಹಾರದ ಬಗ್ಗೆ ಹೇಳುವುದಾದರೆ ನಾನು ಈ ಸಂದರ್ಭದಲ್ಲಿ ಏನೂ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ.

ಅಧ್ಯಕ್ಷರು :- ಚರ್ಚೆಗೆ ಒಂದು ಸಲ ಪ್ರಾರಂಭ ಮಾಡಿದರೆ ಎಲ್ಲಾ ವಿಚಾರಕ್ಕೂ ಹಾಗೆ ಬರುತ್ತದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ :- ಮಾನ್ಯ ಅಧ್ಯಕ್ಷರೇ, ನೂರಾರು ಎಕರೆ ಕೃಷಿ ಹಾಳಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಕೆಲವು ವೈರಸ್ ನಿಂದ ರೋಗಗಳು ಬರುತ್ತವೆ ಹಾಗೆ ರೋಗಗಳು ಬಂದಾಗ ಮರಗಳನ್ನು ಬೆಂಕಿ ಹಾಕಿ ಸುಡುವಂತಹ ಅನಿವಾರ್ಯ ಪ್ರಸಂಗಗಳು ಬರುತ್ತದೆ ಎಂದು ಹೇಳಿದರು. ನಿಜ, ಅದನ್ನು ನಾನು ಒಪ್ಪುತ್ತೇನೆ. ಆ ರೀತಿಯ ಸಮಸ್ಯೆಯನ್ನು ಎದುರಿಸುತ್ತಿದ್ದೇನೆ, ವಿಚಿತ್ರ ವಾದಂತಹ ರೋಗಗಳು ಬರುತ್ತದೆ. ಅವುಗಳು ಅಕ್ಕಪಕ್ಕದ ರೈತರ ಜಮೀನಿಗೆ ಹರಡಬಾರದು ಎನ್ನುವ ದೃಷ್ಟಿಯಿಂದ ಬೆಂಕಿ ಹಾಕಿ ಸುಡುವ ಕ್ರಮವನ್ನು ಅನುಸರಿಸುತ್ತಿದ್ದು, ಇದರಿಂದ ಬೇರೆ ರೈತರಿಗೆ ತೊಂದರೆ ಆಗಬಾರದು ಎನ್ನುವುದು ಒಂದು ಉದ್ದೇಶ ಇದೆ. ಈ ರೀತಿಯಾದಂತಹ ಸಂದರ್ಭದಲ್ಲಿ ರೈತ ಒಂದು ಎಕರೆಗೆ 16 ಸಾವಿರ ರೂಪಾಯಿ ಖರ್ಚು ಮಾಡಿ ಏಳು ವರ್ಷ ಕೃಷಿ ಮಾಡಿದಂತಹವನಿಗೆ ಪರಿಹಾರ ಕೊಡುವುದಕ್ಕೆ ವಿಶೇಷವಾದ ಸಂದರ್ಭದಲ್ಲಿ ಸರ್ಕಾರ ಮುಂದೆ ಬರಬೇಕಾಗುತ್ತದೆ. ಅದನ್ನು ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿರುವುದು. ನಿಮ್ಮ ತಜ್ಞರು ಹೋಗಿ ಬಂದಮೇಲೆ ಆ ರೋಗವನ್ನು ತಡೆಯುವುದಕ್ಕೆ ಸಾಧ್ಯವಿಲ್ಲ, ಅವನಿಗೆ ತುಂಬಾ ನಷ್ಟವಾಗಿದೆ ಎಂದು ಮನಗಂಡರೆ ಆಗಲಾದರೂ ಪರಿಹಾರ ಕೊಡುವುದಕ್ಕೆ ತಾವು ಪರಿಶೀಲನೆ ಮಾಡಿ.

ಶ್ರೀ ಸಿ. ಬೈರೇಗೌಡ :- ಈ ಸಂದರ್ಭದಲ್ಲಿ I am not commiting any thing ಅಂತ ಹೇಳಿದೆ.

ಅಧ್ಯಕ್ಷರು :- ಮಾನ್ಯ ಮಂತ್ರಿಯವರಿಗೆ ಮನವರಿಕೆಯಾಗಿದೆ. ಆದರೆ ಈಗಲೇ ನಾನು ಏನೂ ಹೇಳುವುದಿಲ್ಲವೆಂದು ಹೇಳುತ್ತಿದ್ದಾರೆ.